ಶ್ರೀ ಆರ್. ಎಂ. ಪಾಟೀಲ್.—Refuse ಮಾಡಿಲ್ಲ. ಕಾರಣ ಕೇಳಿದ್ದಾರೆ.

Sri V. S. PATIL.—May I know whether there is any law either of the Centre or of the State to deal with persons who insult or misuse the National Flag ?

Sri R. M. PATIL.—There is a Central Act.

Sri V. S. PATIL.—Why is the case still pending thought lady has expressed regret ?

Sri R. M. PATIL.—The reasons are to be sent to the court.

Mr. SPEAKER.—Question 636. The Hon'ble member has written to me that due to some calamity in his house he is unable to other the House and he has also requested me to put his question. I will do so if there is time.

Question 668 will be held over as the Minister concerned is not here.

Retired Government Servants getting Pensions from the State Government as on 15th March 1963.

*Q.—681. **Sri S. GOPALA GOWDA** (Thirthahalli).—

Will the Government be pleased to state :—

(*a*) the number of retired Government servants getting pension from the State Government as on 15the March 1963 ;

(*b*) the number of such pensioners earning pension from Re. 1 to Rs. 100, Rs. 101 to Rs. 200 and above Rs. 200 Per Month ;

(*c*) whether the State Pensioners Association have represented to the Hon'ble Chief Minister on 22nd January 1963 that Dearness Allowance should be granted to those getting a pension between Rs. 101 and Rs. 200 Per Month ;

(*d*) The annual expenditure to be incurred by them in case this request in accepted ;

(*e*) The amount of Dearness Allowance being given at present to those getting a pension from Re. 1 to Rs. 100 Per Month ?

*A.—**Sri B. D. JATTI** (Minister for Finance).—

(*a*) 22,157.

(*b*) 1. No. of pensioners earning pension from Re. 1 to Rs. 100 20,219

2. No. of pensioner earning pension from Rs. 101 to Rs. 200 1,329

3. No. of pensioners earning pension above Rs. 200 609

(*c*) Yes. The request is to raise the Dearness Allowance from Rs. 10 to Rs. 15 to all pensioners drawing a pension of Rs. 200 and less.

(*d*) Rs. 34,89,000 (Approximately).

(*e*) Rs. 10 Per Month.

ಶ್ರೀ ಎಸ್. ಗೋಪಾಲಗೌಡ.—ಪೆನ್‌ಷನ್‌ದಾರರುಗಳಿಗೆ ತುಟ್ಟಿಭತ್ಯವನ್ನು ಹೆಚ್ಚಿಸುವ ವಿಷಯವನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆಯೇ, ಸ್ವಾಮಿ?

ಶ್ರೀ ಬಿ. ಡಿ. ಜತ್ತಿ.—ಪರಿಶೀಲನೆಮಾಡಿ ಆಯಿತು.

ಶ್ರೀ ಎಸ್. ಗೋಪಾಲಗೌಡ.—ಅವರಿಗೆ ಹೆಚ್ಚಿಗೆ ಭತ್ಯ ಕೊಟ್ಟರೆ ಸರ್ಕಾರ ಹೇಳುವ ಪ್ರಕಾರ 34,89,000 ರೂಪಾಯಿ ಆಗುತ್ತದೆ. ಈ ಹಣ ಪೆನ್‌ಷನ್‌ದಾರರ ಸಂಖ್ಯೆಯ ದೃಷ್ಟಿಯಿಂದ ಹೆಚ್ಚಾಗುವುದಿಲ್ಲ. ಈ ಹಣವನ್ನು ಕೊಡುವುದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ, ಸ್ವಾಮಿ?

ಶ್ರೀ ಬಿ. ಡಿ, ಜತ್ತಿ.—ಈಗಾಗಲೇ ಎರಡು ಸಲ ಪುನರ್ವಿಮರ್ಶೆ ಮಾಡಿದೆ. ಈಗ ಸದ್ಯಕ್ಕೆ ಹಣ ಕಾಸಿನ ಪರಿಸ್ಥಿತಿ ನೆಟ್ಟಗೆ ಇಲ್ಲವೆಂದು ತಿಳಿದುಕೊಂಡು ಮನಸ್ಸು ಮಾಡುವುದಕ್ಕೆ ಬರುವುದಿಲ್ಲ.

Sri P. F. D'MELLOW.—Is it not a fact that representation was made to the Chief Minister and the Government for extending certain medical facilities and educational concessions to them?

Sri B. D. JATTI.—Yes, it is one of the requests.

ಶ್ರೀ ಎಸ್. ಗೋಪಾಲಗೌಡ.—ಕಮ್ಯುಟೇಷನ್ ಆಫ್ ಪೆನ್‌ಷನ್ ತೆಗೆದುಕೊಳ್ಳುವವರಿಗೆ 65 ವರ್ಷ ವಯಸ್ಸಾದನಂತರ ಅವರ ಕಮ್ಯುಟೇಷನ್ ಹಣದಲ್ಲಿ ಹೆಚ್ಚು ಬಂಡವಾಳ ಸರ್ಕಾರಕ್ಕೆ ಉಳಿಯುವುದರಿಂದ ಅವರಿಗೆ ಕೊಡುವ ವಿಶ್ರಾಂತಿ ವೇತನವನ್ನು ಪುನಃ ವಿಮರ್ಶೆ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲವೆ, ಸ್ವಾಮಿ?

ಶ್ರೀ ಬಿ. ಡಿ. ಜತ್ತಿ.—ಸದ್ಯದ ಪರಿಸ್ಥಿತಿಯೊಳಗೆ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಮೊದಲನೆಯ ಮಹಾಯುದ್ಧದನಂತರ ಎಂಟು ಹತ್ತು ಬಾರಿ ಪೆನ್‌ಷನ್ ಕೊಡತಕ್ಕ ಹಣವನ್ನು ಅವರು ಪುನರ್ವಿಮರ್ಶೆ ಮಾಡಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ಆ ವಿಷಯ ನನಗೆ ಗೊತ್ತಿಲ್ಲ. ನಮ್ಮಲ್ಲಿ ಎರಡು ಸಲ ಪುನರ್ವಿಮರ್ಶೆ ಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದ ಹಣಕಾಸಿನ ಪರಿಸ್ಥಿತಿ ನೆಟ್ಟಗಾದರೆ ಪೆನ್‌ಷನರುಗಳ ತುಟ್ಟಿಭತ್ಯವನ್ನು ಎಷ್ಟು ಹೆಚ್ಚಿಸಬೇಕೆಂದು ಸರ್ಕಾರ ಯೋಚನೆ ಮಾಡಿದೆ?

Mr. SPEAKER.—It is purely hypothetical and imaginary.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂಡಿಯಾ ಸರ್ಕಾರದಿಂದ ಯಾವುದಾದರೂ ರೀತಿಯ ಸವಲತ್ತು ಕೊಡಬೇಕೆಂದು ಡೈರೆಕ್ಷನ್ ಇದೆಯೇ? ಡೆಲ್ಲಿಯಲ್ಲಿ ಒಂದು ಅಸೋಸಿಯೇಷನ್ ಇದೆ ಅವರೇನಾದರೂ ರಾಜ್ಯ ಸರ್ಕಾರಗಳಿಗೆ ಪೆನ್‌ಷನರುಗಳ ವಿಷಯವಾಗಿ ಸಹಾನುಭೂತಿಯಿಂದ ಪರಿಶೀಲಿಸಬೇಕು ಎಂದು ಮನವಿ ಮಾಡಿದ್ದಾರೆಯೇ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೂ ಕೇಂದ್ರ ಸರ್ಕಾರದಿಂದ ಯಾವುದೇ Request, Direction, ಅಥವಾ Instruction ಬರಲಿಲ್ಲ.

ಶ್ರೀ ಎ. ಮಸಿಯಪ್ಪ.—ನಿವೃತ್ತರಾಗತಕ್ಕ ಅಧಿಕಾರಿಗಳಿಗೆ ಅವರು ನಿವೃತ್ತರಾದ ಆರು ತಿಂಗಳ ಅವಧಿಯೊಳಗೆ ನಿವೃತ್ತ ವೇತನ ಪ್ರಾವಿಡೆಯಾಗುವಂತೆ ವ್ಯವಸ್ಥೆ ಮಾಡುತ್ತೇವೆಂದು ಅನೇಕ ಸಂದರ್ಭಗಳಲ್ಲಿ ಆಶ್ವಾಸನೆಯನ್ನು ಕೊಡುತ್ತ ಬಂದರು. ಇವತ್ತಿನವರೆಗೂ ಪೆನ್‌ಷನ್ ಪೇಪರುಗಳು ಇತ್ಯರ್ಥವಾಗದೆ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳುವುದು ಅಷ್ಟೊಂದು ಈಗ ನಿರಿಯಲ್ಲ. ಯಾವ ದಿನ ಅಧಿಕಾರಿಗಳು ನಿವೃತ್ತರಾಗುತ್ತಾರೆಯೋ ಆ ದಿನಕ್ಕೆ ನರಿಯಾಗಿ ಡೆತ್—ಕಂ—ರಿಟೈರ್‌ಮೆಂಟ್ ಗ್ರ್ಯಾಚುಯಿಟಿ ಸಿಕ್ಕುತ್ತದೆ. ಆಮೇಲೆ ಒಂದು ತಿಂಗಳಲ್ಲಿ ಪೆನ್‌ಷನ್ ಸಿಕ್ಕುತ್ತದೆ. ಕೆಲವು ಸಂದರ್ಭಗಳಲ್ಲಿ ಹೈದರಾಬಾದು ಮತ್ತು ಮುಂಬೈಗಳಿಂದ ಇನ್ನೂ ಕಾಗದ ಪತ್ರಗಳು ಬಂದಿಲ್ಲ. ಇಂಥವು ಮಾತ್ರ ನಿಧಾನವಾಗುತ್ತಿವೆ.

ಶ್ರೀ ಎಸ್. ಗೋಪಾಲಗೌಡ.—ಜೀವನದ ವೆಚ್ಚ ಈಚಿನ 10—12 ವರ್ಷಗಳಲ್ಲಿ ಬಹಳ ಹೆಚ್ಚಾಗಿರುವುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು 200 ರೂಪಾಯಿಗಳಿಗಿಂತ ಕಡಮೆ ವಿಶ್ರಾಂತಿ ವೇತನವನ್ನು ಪಡೆಯತಕ್ಕವರಿಗೆ ಹೆಚ್ಚಿನ ತುಟ್ಟಿಭತ್ಯ ಕೊಡುವುದಕ್ಕೆ ಮತ್ತು ಅವರ ಪೆನ್‌ಷನ್ ಪುನರ್ವಿಮರ್ಶೆ ಮಾಡುವುದಕ್ಕೆ ಮತ್ತೊಮ್ಮೆ ಪರಿಶೀಲನೆ ಮಾಡುತ್ತಾರೆಯೇ, ಸ್ವಾಮಿ?

ಶ್ರೀ ಬಿ. ಡಿ. ಜತ್ತಿ.—ಈಗ ಹಣಕಾಸಿನ ಪರಿಸ್ಥಿತಿ ನೆಟ್ಟಗಿಲ್ಲದೆಯಿರುವುದರಿಂದ ಸದ್ಯಕ್ಕೆ ಸಾಧ್ಯ ಕಾಣುವುದಿಲ್ಲ.

Sri G. V. GOWDA.—May I know what has happened to the request to extend medical facilities and educational concession?

Sri B. D. JATTI.—Those in service under a particular income group are getting these facilities; these people also come under that category.

Sri K. S. SURYANARAYANA RAO.—Is it not a fact that non-finalisation of inter-state seniority list has also affected the settling of pensions?

Sri B. D. JATTI.—There is nothing like that; there may be one or two such cases.

ಶ್ರೀ ಎಸ್. ಗೋಪಾಲಗೌಡ.—ವಯಸ್ಸಾಗಿರತಕ್ಕ ವಿಶ್ರಾಂತಿ ವೇತನವನ್ನು ನಂಬಿಕೊಂಡು ಜೀವನಮಾಡತಕ್ಕ ಈ ಜನರು ಬಹಳ ಕಷ್ಟದಲ್ಲಿದ್ದಾರೆ. ಅವರು ಜೀವನ ನಡೆಸಿಕೊಂಡು ಹೋಗುವುದು ಬಹಳ ಕಷ್ಟವಾಗುವುದರಿಂದ ಅವರಿಗೆ ಹೆಚ್ಚಿನ ತುಟ್ಟಿಭತ್ಯ ಮತ್ತು ಹೆಚ್ಚಿನ ಪೆನ್‌ಷನ್ ಕೊಡುವುದು ಸರಿ ಎನ್ನುವುದನ್ನು ತತ್ವದಲ್ಲಿಯಾದರೂ ಸರ್ಕಾರ ಒಪ್ಪುತ್ತದೆಯೇ, ಸ್ವಾಮಿ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರದ ಹತ್ತಿರ ಹೆಚ್ಚಾಗಿ ಕೊಡಲು ಹಣವಿಲ್ಲದ್ದರಿಂದ ತತ್ವ ಸರಿಯೇ ಅಲ್ಲವೇ ಎಂದು ಹೇಳುವುದು ಸರಿಕಾಣುವುದಿಲ್ಲ.

Sri S. SIVAPPA.—Will the Government be pleased to state the difference between the D A. that is being paid to Government servants in service and who draw up to Rs. 100 and the D.A. paid to pensioners getting pension up to Rs. 100?

Sri B. D. JATTI.—Sir, it is a sliding scale of D.A. I will furnish the information to the Hon'ble Member if he desires.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ, ಸಾಧ್ಯವಿಲ್ಲ ಎಂದು ಹೇಳಿದರು. ಹಾಗಾದರೆ ಇನ್ನೆಷ್ಟು ವರ್ಷಗಳಲ್ಲಿ ಅದು ಸರಿಯಾಗಿ ಆಗುತ್ತದೆ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೆಚ್ಚಾಗಿ ಟ್ಯಾಕ್ಸ್ ಕೊಡಲು ಒಪ್ಪಿಕೊಂಡರೆ ಪರಿಸ್ಥಿತಿ ಇಂಪ್ರೂವ್ ಆಗುತ್ತದೆ.

Mr. SPEAKER.—The Hon'ble Member always puts supplementaries whose admissibility is doubtful.

Sri S. SIVAPPA.—Will the Government consider the desirability of giving D.A. to the pensioners on the same scale as is paid to Government Servants in service drawing between Re. 1 and Rs. 100?

Sri B. D. JATTI.—There is a slight difference. The Hon'ble Member need not have any confusion. Government servants retiring from service on or after 1-7-1963 shall not get any D.A. or temporary increase in pension because their D.A. will have been absorbed in the normal pay. It will form part of the basic pay.

ಶ್ರೀ ಎಸ್. ಗೋಪಾಲಗೌಡ.—ಸರಕಾರದವರು ಇವರಿಗೆ ವೈದ್ಯಕೀಯ ಸೌಲಭ್ಯ, ಅವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಸೌಲಭ್ಯ ಕೊಡುತ್ತಾ ಇದ್ದಾರೆಯೇ?

ಶ್ರೀ ಬಿ. ಡಿ. ಜತ್ತಿ.—ಇನ್ನೂರು ರೂಪಾಯಿಗಳಿಗಿಂತ ಕಡಮೆಯಾಗಿರತಕ್ಕಂಥ ಕ್ಯಾಟಗರಿಯವರಿಗೆ ವೈದ್ಯಕೀಯ ಮುಂತಾದ ಸಹಾಯ ಸಿಕ್ಕುತ್ತದೆ.

Constitution of a Board for the Development of Backward Border Areas in the State.

*Q.—699. Sri S. RUDRAPPA (Kalgi).—

Will the Government be pleased to state:—

(*a*) whether it is a fact that the Government have constituted a Board for Development of Backward Border areas in the State;

(*b*) if so, names of such Districts that have been included under the purview of the Board?